

## ಸುಷ್ಮಾ ಅರಳಿಸಿದ ಚಿತ್ರಕಲೆ

ಬಾಗಲಕೋಟೆ ಮೂಲದ ಸುಷ್ಮಾ ಈಗ ಮೈಸೂರಿನವರೇ ಆಗಿದ್ದಾರೆ. ಮೈಸೂರಿನಲ್ಲಿಯೇ ಮಾತು ಕಲಿತು ಅಲ್ಲಿಯೇ ವಿದ್ಯಾಭ್ಯಾಸವನ್ನೂ ಮುಗಿಸಿ ಈಗ ವಿಪ್ರೊ ಕಂಪೆನಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದಾರೆ. ಎಸ್‌ಎಸ್‌ಎಲ್‌ಸಿ.ಯಲ್ಲಿ ಶೇ 92ರಷ್ಟು ಅಂಕಗಳನ್ನು ಪಡೆದ ಸುಷ್ಮಾ ಪಿ.ಯು.ಸಿ.ಯಲ್ಲಿ ಶೇ 82ರಷ್ಟು ಅಂಕ ಪಡೆದರು. ಸಿಇಟಿ ಮೂಲಕ ಮೈಸೂರಿನ ಎಸ್‌ಜೆ.ಸಿ.ಇ. ಕಾಲೇಜಿನಲ್ಲಿ ಬಿ.ಇ. ಮುಗಿಸಿದರು. ಚಿಕ್ಕವರಿದ್ದಾಗಿನಿಂದಲೂ ಚಿತ್ರಕಲೆಯಲ್ಲಿ ಆಸಕ್ತಿ ಮೂಡಿಸಿಕೊಂಡ ಅವರು ತಮ್ಮ ಭಾವನೆಗಳನ್ನು ಬಣ್ಣಗಳಲ್ಲಿ ಹಿಡಿದಿಟ್ಟರು. ಬಾಲಭವನ ನಡೆಸುವ ಸ್ಪರ್ಧೆಯಲ್ಲಿ ರಾಷ್ಟ್ರೀಯ ಬಹುಮಾನವನ್ನೂ ಪಡೆದುಕೊಂಡಿದ್ದಾರೆ. ಮೈಸೂರಿನ 'ಕೌಟಿಲ್ಯ ವಿದ್ಯಾ ಸಂಸ್ಥೆ' ನಡೆಸಿದ ಚಿತ್ರಕಲಾ ಸ್ಪರ್ಧೆಯಲ್ಲಿ ರಾಜ್ಯಮಟ್ಟದ ಬಹುಮಾನವನ್ನೂ ಗಳಿಸಿದ್ದಾರೆ. ದಸರಾ ಪ್ರಶಸ್ತಿಯೂ ಅವರಿಗೆ ಸಂದಿದೆ.

## ಸ್ಫೂರ್ತಿಯ ಸ್ಫೂರ್ತಿ

ಪಿರಿಯಾಪಟ್ಟಣದ ಸ್ಫೂರ್ತಿ 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್'ನಿಂದ ಕಂಪ್ಯೂಟರ್ ಸೈನ್ಸ್‌ನಲ್ಲಿ ಬಿ.ಇ. ಪದವಿ ಪಡೆದುಕೊಂಡಿದ್ದಾರೆ. ಎಸ್‌ಎಸ್‌ಎಲ್‌ಸಿ.ಯಲ್ಲಿ ಶೇ 83 ಹಾಗೂ ಪಿ.ಯು.ಸಿ.ಯಲ್ಲಿ ಶೇ 78 ಅಂಕ ಪಡೆದ ಸ್ಫೂರ್ತಿ ಸಿಇಟಿಯಲ್ಲಿ ಅತ್ಯುತ್ತಮ ಅಂಕ ಪಡೆದು ಸರ್ಕಾರಿ ಕೋಟಾದಲ್ಲಿ ಎಂಜಿನಿಯರಿಂಗ್ ಸೀಟು ಪಡೆದುಕೊಂಡರು. ಮೈಸೂರು ಎಸ್‌ಜೆ.ಸಿ.ಇ.ನಲ್ಲಿ ಎಂ.ಟೆಕ್ ಪದವಿ ಪಡೆದುಕೊಂಡಿರುವ ಅವರಿಗೆ ಚಿತ್ರಕಲೆಯಲ್ಲಿ ಆಸಕ್ತಿ. ಅದಕ್ಕಿಂತ ಹೆಚ್ಚಾಗಿ ಭಾಷಣ ಕಲೆಯೂ ಅವರಿಗೆ ಸಿದ್ಧಿಸಿದೆ. ಶಾಲಾ ಕಾಲೇಜುಗಳಲ್ಲಿ ವಿವಿಧ ಭಾಷಣ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದುಕೊಂಡಿದ್ದಾರೆ. ಶ್ರವಣ ದೋಷದಿಂದ ಮಾತು ಬಾರದಿದ್ದ ಹುಡುಗಿಯೊಬ್ಬಳು ಅಮ್ಮನ ಪ್ರಯತ್ನದಿಂದ ಮಾತನ್ನು ಕಲಿತು ಭಾಷಣ ಮಾಡುವ ಮಟ್ಟಕ್ಕೆ ಏರಿದ್ದು ಅಚ್ಚರಿಯ ಸಾಧನೆ.





ಸಮಸ್ಯೆ ಏನು ಎಂದು ಅರ್ಥ ಮಾಡಿಸುವುದು ಕೊಂಚ ಕಷ್ಟ. ಅವರಿಗೆ ಅವರ ಸಮಸ್ಯೆ ಏನೆಂದು ತಿಳಿದ ನಂತರ ಅವರನ್ನು ಹಿಡಿಯುವವರೇ ಇಲ್ಲ. ಅವರು ತಮಗೆ ಸೂಕ್ತವಾದ ಕ್ಷೇತ್ರವನ್ನು ಆಯ್ಕೆ ಮಾಡಿಕೊಂಡು ಅದರಲ್ಲಿ ಸಾಧನೆ ಮಾಡಲು ತೊಡಗುತ್ತಾರೆ. ಸಾಮಾನ್ಯ ಮಕ್ಕಳಿಗೆ ಇರುವ ಯಾವುದೇ ಅಡೆತಡೆ ಅವರಿಗೆ ಇರುವುದಿಲ್ಲ. ಹಿಡಿದ ಕೆಲಸವನ್ನು ಸರಿಯಾಗಿ ಮುಗಿಸುವ ಛಲ ಇರುತ್ತದೆ. ಮಾಡುವ ಕೆಲಸದಲ್ಲಿ ತಲ್ಲೀನತೆ ಇರುತ್ತದೆ. ತಾವೇ ಕಲಿಯಬೇಕು ಎಂಬ ಆಸೆ ಇರುತ್ತದೆ. ಅದಕ್ಕೆ ತಕ್ಕ ಶ್ರಮವನ್ನು ಹಾಕುತ್ತಾರೆ. ಅದಕ್ಕೇ ಅವರು ಬದುಕಿನಲ್ಲಿ ಮುಂದೆ ಬರುತ್ತಾರೆ' ಎಂದು ಶ್ರವಣದೋಷವುಳ್ಳ ಮಕ್ಕಳ ಪಾಲನೆಯಲ್ಲಿ ತಮ್ಮ ಜೀವನವನ್ನೇ ಮುಡುಪಾಗಿಟ್ಟುಕೊಂಡಿರುವ ರತ್ನಾ ಶೆಟ್ಟಿ ಹೇಳುತ್ತಾರೆ.

ವಿದ್ಯಾಭ್ಯಾಸದಲ್ಲಿಯೂ ಅವರು ಮುಂದಿರುತ್ತಾರೆ. ತಮಗೆ ಬರಬಹುದಾದ ತೊಂದರೆಗಳನ್ನು ಮೊದಲೇ ಊಹಿಸಿ ಅದಕ್ಕೆ ಪರಿಹಾರವನ್ನೂ ಕಂಡುಕೊಳ್ಳಲು ಯತ್ನಿಸುತ್ತಾರೆ. ಅದೇ ರೀತಿ ಅವರು ಕೆಲಸಕ್ಕೆ ಸೇರಿದ ನಂತರವೂ ಅತ್ಯಂತ ಸೊಗಸಾಗಿ ಕೆಲಸ ನಿರ್ವಹಿಸುತ್ತಾರೆ ಎಂಬುದು ಅವರ ಅಭಿಮತ.

ತಮ್ಮ ಮಗಳನ್ನು ಗ್ರಾಫಿಕ್ ವಿನ್ಯಾಸಕಾರ್ತಿಯಾಗಿ ರೂಪಿಸಿರುವ ಮಲ್ಲಿಕಾರ್ಜುನಯ್ಯ ಕೂಡ ಈ